# ಪ್ರೀತಿಯ ಸುನಾಮಿ

■ ಡೊನಾಲ್ಡ್ ಪಿರೇರಾ ಬೆಳ್ತಂಗಡಿ

ರಾಜೇಶ್‌ಗೆ ಹೊಸ ಬದುಕು ಲಭಿಸಿತ್ತು. ಆತನಿಗೀಗ ಕನಸಿನಲ್ಲೂ ಒಂದೇ ಗುಂಗು. ವಿನುತ... ಹಾ! ಆಕೆಯನ್ನು ದೇವರೇ ತನಗಾಗಿ ರಚಿಸಿದ್ದಾನೆ! ಆಕೆಯ ಕೈ ಹಿಡಿದರೆ ತನ್ನ ಜೀವನ ಸಾರ್ಥಕವೆಂಬ ಕನವರಿಕೆ. ಕಳೆದು ಹೋದ ಕರಾಳ ದಿನಗಳು ಮರೆಗೆ ಸಂದಿದ್ದವು.

ಬೆಳಗ್ಗಿನ ಮೂರು ಗಂಟೆಯಾಗಿದ್ದರೂ ಆತನಿಗೆ ನಿದ್ದೆ ಬಂದಿರಲಿಲ್ಲ. ಯೋಚನೆಗಳಲ್ಲಿ ಮುಳುಗಿದ್ದವನಿಗೆ ನಿದ್ದೆ ಆವರಿಸೀತು ಹೇಗೆ? ಬೇಗ ಬೆಳಗಾಗಲಿ ಎಂದು ಕಾಯುತ್ತಿದ್ದಾತನಿಗೆ ಅಲ್ಲೇ ಮಂಪರು. ಮೊಬೈಲ್ ಸದ್ದಿಗೆ ಆತನಿಗೆ ಎಚ್ಚರವಾಯಿತು.

ಹಾಯ್ ಸ್ವೀಟ್ ಹಾರ್ಟ್... ಗುಡ್ ಮಾರ್ನಿಂಗ್ ಸಂದೇಶ ಬಂದಿತ್ತು ಫೇಸ್‌ಬುಕ್ ಮೆಸೆಂಜರ್‌ನಲ್ಲಿ.

ಗುಡ್ ಮಾರ್ನಿಂಗ್ ಹನಿ. ಉ..ಮ್ಮಾ... ಮೊಬೈಲನ್ನೇ ಮುದ್ದಿಸಿ ರಿಪ್ಲೈ ಮಾಡಿದ ರಾಜೇಶ್.

ಎಂದಿನಂತೆ ಚಾಟಿಂಗ್ ಗಂಟೆಗಟ್ಟಲೆ ನಡೆಯಿತು. ಇತ್ತೀಚಿನ ದಿನಗಳಲ್ಲಿ ತಾನು ವಿಪರೀತ ಚಾಟಿಂಗ್ ನಡೆಸುತ್ತಿದ್ದೇನೆಂಬುದರ ಅರಿವಾಗಿತ್ತು ರಾಜೇಶನಿಗೆ. ಕಚೇರಿಗೆ ತೆರಳುವಾಗ ತಡವಾಗುತ್ತಿತ್ತು. ಆಫೀಸಿನಲ್ಲಿ ಗಮನವೆಲ್ಲಾ ಮೊಬೈಲ್ ಕಡೆಗೇ. ಹಿಂದಿನಂತೆ ತದೇಕಚಿತ್ತದಿಂದ ಆತ ಕೆಲಸ ಮಾಡುತ್ತಿಲ್ಲವೆಂಬುದನ್ನು ಸಹೋದ್ಯೋಗಿಗಳೂ ಕಂಡುಕೊಂಡಿದ್ದರು.

ಆರೇಳು ತಿಂಗಳ ಹಿಂದೆ ರಾಜೇಶನಿಗೆ ವಿನುತಾಳ ಪರಿಚಯವಾಗಿತ್ತು, ಫೇಸ್‌ಬುಕ್‌ನಲ್ಲಿ. ಮೊದಲು ಆತನಿಗೆ ಫೇಸ್‌ಬುಕ್‌ನ ಹುಚ್ಚು ಇರಲಿಲ್ಲ. ಹೊಸ ಪ್ರೊಫೈಲ್ ಶುರು ಮಾಡಿದಾಗಿನಿಂದ ಆತನ ಜೀವನವೇ ಬದಲಾಗಿತ್ತು. ಕೆಲವೇ ದಿನಗಳಲ್ಲಿ ವಿನುತಾ ಆತನ ಸಂಪರ್ಕಕ್ಕೆ ಬಂದಿದ್ದಳು. ಅವಳ ಫೋಟೊ ನೋಡಿ ಆತ ಮರುಳಾಗಿದ್ದ. ಪರಿಚಯ ಸ್ನೇಹಕ್ಕೆ ತಿರುಗಿತ್ತು.

ವಿನುತಳಿಗೂ ಅಷ್ಟೇ. ರಾಜೇಶನ ಮಾತುಗಳೆಂದರೆ ಆಕೆಗೆ ಖುಷಿ. ಆತ ತನ್ನ ಬಗೆಗೆ ತೋರುವ ಕಾಳಜಿ, ಆಸಕ್ತಿ ಆಕೆಗೆ ಸಂತೃಪ್ತಿ ನೀಡುತ್ತಿತ್ತು. ಟ್ರಾವೆಲಿಂಗ್ ಕಂಪೆನಿಯಲ್ಲಿ ದುಡಿಯುವ ಆಕೆಗೆ ಇಂಟರ್ನೆಟ್ ಹೊಸದಲ್ಲ. ಆಫೀಸಿನಲ್ಲಿ ಖಾಸಗಿ ಉದ್ದೇಶಕ್ಕೆ ಕಂಪ್ಯೂಟರ್ ಬಳಸುವಂತಿರಲಿಲ್ಲ. ಆಕೆಯ ಸಹೋದ್ಯೋಗಿಗಳು ಸಾಧ್ಯವಾದಾಗೆಲ್ಲಾ ಇಂಟರ್ನೆಟ್ ನೋಡುತ್ತಿದ್ದರು.

ಅದೊಂದು ದಿನ, ಹಿರಿಯ ಅಧಿಕಾರಿಗಳ ಗೈರಿನಲ್ಲಿ ಸ್ನೇಹಿತೆ ಶ್ರೇಯಾ ತನ್ನ ಫೇಸ್‌ಬುಕ್ ಖಾತೆಯನ್ನು ತೆರೆದು ಅದರಲ್ಲಿನ ವೈಚಿತ್ರ್ಯಗಳನ್ನು ವಿನುತಳಿಗೆ ಪರಿಚಯಿಸಿದಳು. ಹೊಸ ಹೊಸ ಗೆಳೆಯರು, ವಿನೂತನ ವಿಚಾರಗಳು, ಚಾಟಿಂಗ್ ಇತ್ಯಾದಿ ನೋಡಿ ಆಕೆ ಬೆರಗಾದಳು. ನಂತರ ಆಕೆಯೂ ಹೊಸ ಪ್ರೊಫೈಲ್ ತೆರೆದಳು. ಫೇಸ್‌ಬುಕ್‌ನ ವಿವಿಧ ಸಂಗತಿಗಳ ಬಗ್ಗೆ ಶ್ರೇಯಾ ಆಕೆಗೆ ತಿಳಿಸಿಕೊಟ್ಟಳು.

ಈಗ ವಿನುತಳಿಗೂ ಹೊಸ ಜೀವನ ಲಭಿಸಿತ್ತು. ಒಂಟಿ ಜೀವನ ನಡೆಸುತ್ತಿದ್ದ ಆಕೆಗೆ ಇದು ವಿನೂತನ ಅನುಭವವಾಗಿತ್ತು. ದಿನ ಕಳೆದದ್ದೇ ಗೊತ್ತಾಗುತ್ತಿರಲಿಲ್ಲ. ಹೊಸದೊಂದು ಲೋಕಕ್ಕೆ ಆಕೆ ಪ್ರವೇಶಿಸಿದ್ದಳು. ರಾಜೇಶ್ ಆತನಿಗೆ ಹೊಸ ಬೆಳಕಾಗಿ ಉದಯಿಸಿದ್ದ.

ಹೌದು. ರಾಜೇಶ್! ಆತನ ಮಾತುಗಳೆಷ್ಟು ಚೆನ್ನ. ಆತನೊಂದಿಗೆ ಚಾಟಿಂಗ್ ನಡೆಸುವುದೆಂದರೆ ಎಷ್ಟು ಉಲ್ಲಾಸಕರ! ಆತನೂ ತನ್ನ ಆಕರ್ಷಣೆಗೆ ಒಳಗಾಗಿರುವುದು ಆಕೆಗೆ ತಿಳಿದಿತ್ತು. ತಾನೂ ಹಾಗೇ ಅಲ್ಲವೇ, ಆತನನ್ನು ಹೃದಯದಲ್ಲಿ ಪೂಜಿಸುತ್ತಿಲ್ಲವೇ? ಆದರೆ ಮೊದಲು ತಾನು ಹೇಗೆ ಹೇಳಲಿ? ಆತನೇ ಮೊದಲು ಹೃದಯದ ಮಾತುಗಳನ್ನು ಪ್ರಕಟಿಸಲಿ. ಮೊದಲ ಆಹ್ವಾನ ಆತನದಾಗಲಿ. ಸಂತೋಷ ತುಂಬಿದ ಆಲೋಚನೆಗಳಿಂದ ಆಕೆ ಸಂಭ್ರಮಿಸುತ್ತಿದ್ದಳು. ಮನಸ್ಸು ಉಲ್ಲಾಸದಿಂದ ಕುಣಿಯುತ್ತಿತ್ತು.

ರಾಜೇಶ್ ಈಗ ಆಫೀಸಿನಿಂದ ಸೀದಾ ಮನೆಗೆ ಹೋಗುತ್ತಿದ್ದ. ಅರೆ, ಬಾರಿಗೆ ಹೋಗುವುದನ್ನು ತಾನು ಬಿಟ್ಟದ್ದು ಯಾವಾಗ? ಆತನಿಗೇ ನೆನಪಿಲ್ಲ! ಎಷ್ಟು ವರ್ಷ ತಾನು ಬಾರಿನಲ್ಲೇ ಸಂಜೆ ಕಳೆಯುತ್ತಿದ್ದೆನಲ್ಲವೆ! ಆಶ್ಚರ್ಯವಾಯಿತು ಅವನಿಗೆ. ದುಃಖ ಮರೆಯಲು, ನಿರಾಶೆ ತೊರೆಯಲು ಮದ್ಯವನ್ನು ಅಪ್ಪಿಕೊಂಡೆ. ನಂತರ ತಾನೇ ಅದಕ್ಕೇ ದಾಸನಾದೆ. ಅದಂತೂ ಬಿಡಿಸಲಾಗದ ಬಂಧನವಾಗಿತ್ತು.

ಆದರೀಗ ತಾನು ಇಷ್ಟೊಂದು ಬದಲಾಗಿ ಬಿಟ್ಟೆನಲ್ಲ! ಹಿಂದಿನ ದಿನಗಳನ್ನು ನೆನಪಿಸುತ್ತಾ ಆಶ್ಚರ್ಯಪಟ್ಟ ರಾಜೇಶ್. ತನ್ನ ಜೀವನ ಎಷ್ಟೊಂದು ಅನಿರೀಕ್ಷಿತ ತಿರುವುಗಳಿಗೆ ಸಾಕ್ಷಿಯಾಯಿತಲ್ಲ? ಅದನ್ನಾತ ಕನಸಿನಲ್ಲೂ ಊಹಿಸಿರಲಿಲ್ಲ. ಕಾಲೇಜು, ನಂತರ ಉದ್ಯೋಗ, ಅದರಲ್ಲಿ ಉನ್ನತಿ. ಏನೆಂದು ಯೋಚಿಸುವಷ್ಟರಲ್ಲಿ ಮನೆಯವರು ತನ್ನ ಮದುವೆಯನ್ನೂ ಮಾಡಿ ಮುಗಿಸಿದ್ದರು. ದುರಾದೃಷ್ಟ! ಆ ಮದುವೆ ವರುಷ ಕಾಣುವ ಮೊದಲೇ ಅಂತ್ಯ ಕಂಡಿತ್ತು. ಅಲ್ಲಿಂದಾಚೆಗೆ ತಾನೆಷ್ಟು ನೋವುಂಡೆ, ದುಃಖಪಟ್ಟೆ! ಅದರ ನೆನಪಿನಿಂದಲೇ ಆತನಿಗೆ ನಿರಾಶೆಯಾಯಿತು. ಬೇಡ, ಅದರ ನೆನಪೇ ಬೇಡ. ಈಗಂತೂ ತನಗೆ ವಿನುತಾ ಇದ್ದಾಳೆ. ತನ್ನ ಭವಿಷ್ಯವೇನಿದ್ದರೂ ಅವಳ ಜೊತೆ. ಈ ಯೋಚನೆಯೇ ಆತನನ್ನು ಪುಳಕಿತಗೊಳಿಸಿತು.

'ಹಾಯ್, ವಾಟ್ ಯು ಡುಯಿಂಗ್ ಹನಿ! ಮಿಸ್ಸಿಂಗ್ ಯೂ ..' ವಿನುತಾಳ ಮೆಸೇಜ್.

'ಲವ್, ವಾಸ್ ಬಿಟ್ ಬ್ಯುಸಿ. ವಾನ್ನಾ ಸ್ಲೀಪ್ ಒನ್ ಯುವರ್ ಲ್ಯಾಪ್ ಎನ್ ಕ್ರೈ...' ಆತ ಸತ್ಯವನ್ನೇ ನುಡಿದಿದ್ದ. ಇನ್ನೆಷ್ಟು ದಿನ ಹೀಗೇ ಚಾಟಿಂಗ್‌ನಲ್ಲಿ ಕಳೆಯೋದು? ಹೇಗೂ ತಾವಿಬ್ಬರೂ ಪರಸ್ಪರ ಹತ್ತಿರವಾಗಿದ್ದೇವೆ, ಒಬ್ಬರನ್ನೊಬ್ಬರು ಬಯಸುತ್ತೇವೆ. ಇಬ್ಬರ ಆಸಕ್ತಿ, ಇಚ್ಛೆಯೂ ಒಂದೇ ಅಲ್ಲವೆ? ಇನ್ನೇನಿದೆ ಕಾಯುವುದಕ್ಕೆ? ಯಾವುದರ ಅಡ್ಡಿಯಿದೆ? ಆತನಿಗೆ ಸಾಂತ್ವನದ ನುಡಿಗಳು ಬೇಕಿದ್ದವು. ಮಧುರ ಸ್ಪರ್ಶಕ್ಕೆ ಆತ ಹಾತೊರೆಯುತ್ತಿದ್ದ.

ವಿನುತಾಳ ಮನಸ್ಸೂ ಅದನ್ನೇ ಚಿಂತಿಸುತ್ತಿತ್ತು. ತಾನು ಸ್ತ್ರೀ, ಮುಕ್ತವಾಗಿ ಹೇಳಲಾರೆ. ಆಕೆ ಕಾಯುತ್ತಿದ್ದಳು.

ನೋಪ್... ನೊ ಟಚಿಂಗ್ ನೌ... ಸಂದೇಶ ಕಳಿಸಿದಳು.

ಯಾ? ಸೊ... ವೆನ್ ಇಟ್ ವುಡ್ ಬಿ?

ಐ ಡೋಂಟ್ ನೊ ವಾಟ್ ಟು ಸೇ...

ಮೈ ಹಾರ್ಟ್ ಇಸ್ ಕಾಲಿಂಗ್ ಯು

ವಾಟ್ ಇಟ್ ಸೇಸ್..? ಟೆಲ್ ಮಿ... ಪ್ಲೀಸ್.

ಇದೇ ಅವಕಾಶ, ರಾಜೇಶನಿಗೆ ಹೊಳೆಯಿತು. ವಾಂಟ್ ಟು ಯು ನೊ; ರಿಯಲ್ಲಿ ವಾಟ್ ಮೈ ಹಾರ್ಟ್ ಸೇಸ್..? ಕೇಳಿದನಾತ.

ಯಾ... ಯಾ... ಐ ಆ್ಯಮ್ ಡೈಯಿಂಗ್. ಪ್ಲೀಸ್ ಪ್ಲೀಸ್... ಟೆಲ್ ನಾ...!

ಇದೇ ಸುಸಂದರ್ಭ. ಇಷ್ಟು ಸಮಯ ಎಷ್ಟೊಂದು, ಏನೆಲ್ಲಾ ಮಾತನಾಡಿದೆವು. ಇನ್ನು ಮುಚ್ಚುಮರೆ ಯಾಕೆ? ಇಬ್ಬರೂ ಒಬ್ಬರನ್ನೊಬ್ಬರು ಬಯಸುತ್ತಿದ್ದೇವೆ. ಈಗ ಹೇಳಿ ಬಿಡುತ್ತೇನೆ. ಹೀಗಂದುಕೊಂಡ ರಾಜೇಶ್,

ವಿನೂ... ನನ್ನ ಹೃದಯ ಏನು ಹೇಳಬೇಕೆಂದಿದೆಯೋ ಅದನ್ನು ಕೇಳಲು ನಿನಗೆ ಒಂದು ಗಂಟೆಯಲ್ಲ, ತಿಂಗಳಾದರೂ ಸಾಕಾಗದು... ಪೀಠಿಕೆ ಹಾಕಿದ.

ಓಹ್, ಸೋ ಲವ್ಲಿ. ನಿಮ್ಮ ಹೃದಯಕ್ಕೆ ಮಾತನಾಡಲು ಬರುತ್ತದೆಯೆ?